Tel Ph No.080-22211707
Fax No. 080-22121982
Website: www.kptcl.com

email ID: cafkptcl@gmail.com
aoress@gmail. com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC0255
ಕಂಪನಿಯ ರಿಜಿಸ್ಟರ್ ಕಚೇರಿಯ ವಿಳಾಸ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-01.

ಸಂಖ್ಯೆ: ಆಸ(ಲೆ ಮತ್ತುಸಂ)/ನಿ(ಹ)/ಲೆ(ಸಂ)/ಕೆಸಿಓ-33/96885/2020-21/6277 ದಿನಾಂಕ: 08-01-2021

ನಿಯಂತ್ರಣಾಧಿಕಾರಿಗಳು,
ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು,
ಲೆಕ್ಕಾಧಿಕಾರಿಗಳು/ವ್ಯವಸ್ಥಾಪಕರು(ಆಂ.ನಿ)/(ನಗದು ಮತ್ತು ಲೆಕ್ಕ),
ಪ್ರಸರಣ ವಲಯ/ಕಾ ಮತ್ತು ಪಾ ವೃತ್ತ/
ಬೃ.ಕಾ ವಿಭಾಗ/ಟಿ.ಎಲ್.ಎಸ್.ಎಸ್ವಿಭಾಗ,
ಕವಿಪ್ರನಿನಿ

ಮಾನ್ಯರೆ,

ವಿಷಯ: ಭೂಖರೀದಿಗಾಗಿ ಸಲ್ಲಿಸುವ ಪ್ರಪತ್ರ ಹುಂಡಿಯೊಡನೆ ಸಲ್ಲಿಸಬೇಕಾದ ದಾಖಲೆಗಳ ಕುರಿತು ಮಾರ್ಗಸೂಚಿ (Guidelines)
ಉಲ್ಲೇಖ: FA(A&R)/C(F)/AO(APR)/KCO-74/18586 dated 23.07.2020

********

ಉಲ್ಲೇಖಿತ ಪತ್ರದಲ್ಲಿ ವಿಭಾಗ ಕಚೇರಿಗಳು ಬಂಡವಾಳ ಕಾಮಗಾರಿ ಬಿಲ್ಲುಗಳನ್ನು ಪಾವತಿಗಾಗಿ ಈ ಕಚೇರಿಗೆ ಸಲ್ಲಿಸುವ ಮೊದಲು ಅನುಸರಿಸಬೇಕಾದ ಕ್ರಮಗಳ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಆದಾಗ್ಯೂ ಕೆಲವೊಂದು ವಿಭಾಗಗಳು ಮಾರ್ಗಸೂಚಿಯನ್ನು ಸಮರ್ಪಕವಾಗಿ ಅನುಸರಿಸದೇ ಭೂಖರೀದಿಗಾಗಿ ಪ್ರಪತ್ರ ಹುಂಡಿಗಳನ್ನು ಪಾವತಿಗಾಗಿ ಸಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ. ಇದರಿಂದ ಸಂಬಂಧಪಟ್ಟ ಫಲಾನುಭವಿಗಳಿಗೆ ಜಮೀನಿನ ಮೊತ್ತವನ್ನು ಪಾವತಿಸುವಲ್ಲಿ ವಿಳಂಬವಾಗುತ್ತಿದ್ದು ನಿಗಮವು ಇದನ್ನು ಗಂಭೀರವಾಗಿ ಪರಿಗಣಿಸಿದೆ.

ಈ ಹಿನ್ನೆಲೆಯಲ್ಲಿ, ಇನ್ನು ಮುಂದೆ ಭೂಖರೀದಿಗಾಗಿ ಸಲ್ಲಿಸುವ ಪ್ರಪತ್ರ ಹುಂಡಿಗಳನ್ನು ಪಾವತಿಗಾಗಿ ಸಲ್ಲಿಸುವಲ್ಲಿ ಈ ಕೆಳಗಿನ ಮಾರ್ಗಸೂಚಿಗಳನ್ನು ತಪ್ಪದೇ ಅನುಸರಿಸಬೇಕೆಂದು ಸೂಚಿಸಲಾಗಿದೆ.

1. ಸರ್ಕಾರಿ ಸ್ವಾಮ್ಯದ ಜಮೀನಾಗಿದ್ದಲ್ಲಿ, ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಭೂ ಬೆಲೆ ನಿಗದೀಕರಣ ಸಮಿತಿ ಸಭೆಯ ನಡಾವಳಿಯ ಪ್ರತಿ ಹಾಗೂ ಭೂ ಬೆಲೆ ಪಾವತಿಸುವಂತೆ ಕೋರಿ ಕವಿಪ್ರನಿನಿಗೆ ನೀಡಿದ ಪತ್ರವನ್ನು ಸಲ್ಲಿಸುವುದು.
2. ಭೂ ಮಾಲೀಕರಿಂದ ಜಮೀನುಗಳನ್ನು ನೇರ ಖರೀದಿ ಮಾಡುವದಾಗಿದ್ದಲ್ಲಿ, ನಿಗಮ ಕಚೇರಿಯಿಂದ ನೀಡಲಾದ ಅನುಮೋದನಾ ಪತ್ರವನ್ನು ಸಲ್ಲಿಸುವುದು.
3. ನಿಗಮ ಕಚೇರಿಯಿಂದ ನೀಡಲಾದ ಅನುಮೋದನಾ ಪತ್ರದಲ್ಲಿ ಸೂಚಿಸಿದ 10 ಅಂಶಗಳನ್ನು ಚಾಚೂ ತಪ್ಪದೇ ಕಾರ್ಯಗತಗೊಳಿಸಬೇಕಾಗಿರುತ್ತದೆ.
4. ವಲಯ ವ್ಯಾಪ್ತಿಯಲ್ಲಿ ಭೂ ಮಾಲೀಕರಿಂದ ಜಮೀನುಗಳನ್ನು ನೇರ ಖರೀದಿ ಮಾಡುವದಾಗಿದ್ದಲ್ಲಿ, ಮುಖ್ಯ ಇಂಜಿನಿಯರು, ಪ್ರಸರಣ ವಲಯ ಕಚೇರಿಯವರಿಂದ ಪಡೆದ ಅನುಮೋದನಾ ಪತ್ರವನ್ನು ಸಲ್ಲಿಸುವುದು.
5. ಭೂ ಮಾಲೀಕರು ಒಂದು ವೇಳೆ ಸದರಿ ಜಮೀನಿನ ಮೇಲೆ ಬ್ಯಾಂಕನಿಂದ ಸಾಲವನ್ನು ಪಡೆದಿದ್ದಲ್ಲಿ, ನೇರ ಖರೀದಿಗೆ ಒಳಪಡುವ ಜಮೀನಿಗೆ ಭೂ ಮಾಲೀಕರು ಪಡೆದ ಸಾಲವನ್ನು ಹಿಂಪಾವತಿಸಿದುದಕ್ಕೆ ದಾಖಲೆ ಒದಗಿಸುವುದು. ಇಲ್ಲದಿದ್ದಲ್ಲಿ, ಸದರಿ ಜಮೀನನ್ನು ಬ್ಯಾಂಕ್‌ನವರು ಕವಿಪ್ರನಿನಿಯ ಹೆಸರಲ್ಲಿ ನೋಂದಣಿ ಮಾಡಿಕೊಳ್ಳಲು, ಭೂ ಖರೀದಿ ಮೊತ್ತವನ್ನು ಬ್ಯಾಂಕ್‌ಗೆ ಪಾವತಿಸುವಂತೆ ಕೋರಿ ನೀಡಿದ ಒಪ್ಪಿಗೆ ಪತ್ರವನ್ನು ಸಲ್ಲಿಸುವುದು.

SEE [MIS]

6. ಒಟ್ಟಾರೆ ಜಮೀನಿನಲ್ಲಿ ಆಂಶಿಕ ಭಾಗವನ್ನು (Partial) ಭೂ ಮಾಲೀಕರಿಂದ ಖರೀದಿಸುತ್ತಿದ್ದಲ್ಲಿ, ಭೂ ಮಾಲೀಕರಿಂದ ಸದರಿ ಜಮೀನಿನ ಭಾಗವನ್ನು ಕವಿಪ್ರನಿನಿಗೆ ಮಾರಾಟ ಮಾಡಲು ಪಡೆದ ಒಪ್ಪಿಗೆ ಪತ್ರವನ್ನು ಸಲ್ಲಿಸುವುದು.
7. ಭೂ ಮಾಲೀಕರು ಒಬ್ಬರಿಗಿಂತ ಹೆಚ್ಚಾಗಿದ್ದು, ಭೂ ಖರೀದಿ ಮೊತ್ತವನ್ನು ಒಟ್ಟಾಗಿ ಪಾವತಿಸುವಂತಿದ್ದಲ್ಲಿ, ಎಲ್ಲಾ ಫಲಾನುಭವಿಗಳಿಂದ ಪಡೆದ ಒಪ್ಪಿಗೆ ಪತ್ರ ಹಾಗೂ ಬ್ಯಾಂಕನಲ್ಲಿ ಹೊಂದಿರುವ ಜಂಟಿ ಖಾತೆಯ ವಿವರಗಳನ್ನು ಸಲ್ಲಿಸುವುದು (ಬ್ಯಾಂಕ್ ಖಾತೆಯ ಪಾಸು ಪುಸ್ತಕದ ಪ್ರತಿಯೊಂದಿಗೆ).
8. ಭೂ ಮಾಲೀಕರು ಒಬ್ಬರಿಗಿಂತ ಹೆಚ್ಚಾಗಿದ್ದು, ಭೂ ಖರೀದಿ ಮೊತ್ತವನ್ನು ಪ್ರತಿಯೊಬ್ಬರಿಗೂ ಪಾವತಿಸುವಂತಿದ್ದಲ್ಲಿ, ಎಲ್ಲಾ ಫಲಾನುಭವಿಗಳಿಂದ ಪಡೆದ ಒಪ್ಪಿಗೆ ಪತ್ರ ಹಾಗೂ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸುವುದು (ಬ್ಯಾಂಕ್ ಖಾತೆಯ ಪಾಸು ಪುಸ್ತಕದ ಪ್ರತಿಯೊಂದಿಗೆ).
9. ಪ್ರತಿಯೊಬ್ಬ ಫಲಾನುಭವಿಗಳ ಗುರುತಿನ ಚೀಟಿ/ಆಧಾರ ಕಾರ್ಡ್‌ನ ಪ್ರತಿ/RTC ಪ್ರತಿ.
10. ಪ್ರಪತ್ರ ಹುಂಡಿಯಲ್ಲಿ ನಮೂದಿಸಿರುವ ಫಲಾನುಭವಿಗಳ ಹೆಸರಿಗೂ, ನಿಗಮದಿಂದ ಅನುಮೋದನೆ ನೀಡಿದ ಆದೇಶದಲ್ಲಿರುವ ಹೆಸರಿಗೂ ಯಾವುದೇ ವ್ಯತ್ಯಾಸ ಕಂಡು ಬರದಂತೆ ಸೂಕ್ತ ಕ್ರಮ ಕೈಗೊಳ್ಳುವುದು.
11. ಭೂ ಖರೀದಿಗೆ ಸಂಬಂಧಪಟ್ಟಂತೆ ಕಾನೂನು ಸಲಹೆಗಾರರಿಂದ ಪಡೆದ ಸಲಹಾ ಪತ್ರವನ್ನು ಸಲ್ಲಿಸುವುದು.
12. ಭೂ ಖರೀದಿಗೆ ಆರ್ಥಿಕ ವರ್ಷದ Annual Programme of Works ನಲ್ಲಿ ಒದಗಿಸಿದ ಬಜೆಟ್ ಹಂಚಿಕೆ, ಇಲ್ಲಿಯವರೆವಿಗೂ ಮಾಡಿದ ಖರ್ಚು, ಉಳಿಕೆ ಬಜೆಟ್ ಹಂಚಿಕೆ, ಇತ್ಯದಿ ವಿವರಗಳನ್ನು ಸಲ್ಲಿಸುವುದು.
13. ಭೂ ಮಾಲೀಕರಿಗೆ ಭೂ ಖರೀದಿ ಮೊತ್ತವನ್ನು ನೇರವಾಗಿ ಬ್ಯಾಂಕ್ ಖಾತೆಗೆ ಪಾವತಿಸಬೇಕಾಗಿದ್ದಲ್ಲಿ, ಸದರಿಯವರ ಬ್ಯಾಂಕ್ ಖಾತೆಯ ವಿವರಗಳನ್ನು ಪಾಸು ಪುಸ್ತಕ/ಚೆಕ್‌ನ ಪ್ರತಿಯೊಂದಿಗೆ ಸಲ್ಲಿಸುವುದು.
14. ಈ ಮೇಲಿನ ಎಲ್ಲಾ ಅಂಶಗಳನ್ನು ಪ್ರಪತ್ರ ಹುಂಡಿಯೊಡನೆ ಸಲ್ಲಿಸಿರುವುದಕ್ಕೆ, ಆಂತರಿಕ ಪರಿಶೋಧಕರಿಂದ ಪರಿಶೀಲಿಸಿ ದೃಢೀಕರಣದೊಂದಿಗೆ ಹುಂಡಿಯನ್ನು ಪಾವತಿಗಾಗಿ ಈ ಕಚೇರಿಗೆ ಸಲ್ಲಿಸುವುದು.

ಮೇಲೆ ಸೂಚಿಸಿರುವ ಎಲ್ಲಾ ಅಂಶಗಳನ್ನು ಸಮರ್ಪಕವಾಗಿ ಪಾಲಿಸಿ, ಇನ್ನು ಮುಂದೆ ಭೂ ಖರೀದಿಯ ಪ್ರಪತ್ರ ಹುಂಡಿಗಳನ್ನು ನಿಗದಿತ ಸಮಯದೊಳಗೆ ಪಾವತಿಗಾಗಿ ಈ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಸದರಿ ಅಂಶಗಳನ್ನು ಪಾಲಿಸುವಲ್ಲಿ ಲೋಪ ಕಂಡುಬಂದಲ್ಲಿ ಅಂತಹ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುದು.

**ನಿರ್ದೇಶಕರು(ಹಣಕಾಸು)ರವರಿಂದ**
**ಅನುಮೋದಿಸಲ್ಪಟ್ಟ ಮೇರೆಗೆ**

ತಮ್ಮ ವಿಶ್ವಾಸಿ,

ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)

ಪ್ರತಿಗಳು ಮಾಹಿತಿಗಾಗಿ;

1. ಆರ್ಥಿಕ ಸಲಹೆಗಾರರು (ಆಂ.ಪ)/ನಿಯಂತ್ರಣಾಧಿಕಾರಿ(ಆಂ.ಪ)/ಉಲೆನಿ(ಆಂ.ಪ)/ಲೆ(ಆಂ.ಪ)/ಸಲೆ(ಆಂ.ಪ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಅಧೀಕ್ಷಕ ಇಂಜಿನಿಯರು(ವಿ),MIS, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರುರವರು ಕವಿಪ್ರನಿನಿಯ ಈ-ಪ್ರಸರಣ ವೆಬ್ ಸೈಟ್‌ನಲ್ಲಿ ನಮೂದಿಸಲು ಕೋರಲಾಗಿದೆ.
3. ಹಿಆಸ, ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
4. ಹಿಆಸ, ನಿರ್ದೇಶಕರು(ಹಣಕಾಸು)/ನಿರ್ದೇಶಕರು(ತಾಂತ್ರಿಕ)ರವರು, ಕವಿಪ್ರನಿನಿರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಮು.ಕ